**ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ನೇಮಕಾತಿ ಮತ್ತು ತರಬೇತಿ), ಬೆಂಗಳೂರು ರವರ ನಡವಳಿ.**

ವಿಷಯ:- ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್)/ ಮಹಿಳಾ ಪೊಲೀಸ್ ಸಬ್-ಇನ್ಸ್‌ಪೆಕ್ಟರ್/ ಸೇವಾನಿರತ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳ ನೇರ ನೇಮಕಾತಿ ಕುರಿತು.

ಉಲ್ಲೇಖ:- 1) ಅಧಿಸೂಚನೆ ಸಂಖ್ಯೆ: 32/ನೇಮಕಾತಿ/2009-10, ದಿನಾಂಕ: 10.06.2009.
2) ನೀವು ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ಆಯ್ಕೆ ಸಲುವಾಗಿ ಸಲ್ಲಿಸಿದ ಅರ್ಜಿ ಸಂಖ್ಯೆ: 45016.
3) ನೀವು ದಿನಾಂಕ: 30.12.2009 ರಂದು ಸಲ್ಲಿಸಿದ ಘೋಷಣೆ.
4) ಭಾರತ ಸರ್ಕಾರದ ಕಛೇರಿ ಜ್ಞಾಪನ ಸಂಖ್ಯೆ: 36034/27/84-ಇಎಸ್‌ಟಿಟಿ(ಎಸ್‌ಸಿಟಿ), ದಿನಾಂಕ: 02.05.1985.
5) ಸರ್ಕಾರದ ಪತ್ರ ಸಂಖ್ಯೆ: ಒಇ/90/ಪೊಸಿಅ/2005, ದಿನಾಂಕ: 02.02.2006.
6) ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ: ಸಿಬ್ಬಂದಿ-1(1)/06/07-08, ದಿನಾಂಕ: 20.02.2010.

* * *

**ಪ್ರಸ್ತಾವನೆ:**

ರಾಜ್ಯ ಮಟ್ಟದ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ನೇಮಕಾತಿ ಸಮಿತಿಯು ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉಲ್ಲೇಖಿತ-1 ರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ನೀವು ಅಧಿಸೂಚನೆ ದಿನಾಂಕ: 10.06.2009 ರನ್ವಯ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಯ ಆಯ್ಕೆ ಸಲುವಾಗಿ ಉಲ್ಲೇಖಿತ-2ರ ಅರ್ಜಿಯನ್ನು ಸಲ್ಲಿಸಿ ಪರಿಶಿಷ್ಟ ಜಾತಿ, ಗ್ರಾಮೀಣ, ಮಾಜಿ ಸೈನಿಕ ಮತ್ತು ಕನ್ನಡ ಮಾಧ್ಯಮ ಮೀಸಲಾತಿಯನ್ನು ಕೋರಿರುತ್ತೀರಿ. ನೀವು ಅರ್ಜಿಯಲ್ಲಿ ನಮೂದಿಸಿದ ವಿವರಗಳ ಆಧಾರದ ಮೇಲೆ ನಿಮ್ಮನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಅಂದರೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತಾ ಪರೀಕ್ಷೆಗೆ, ಲಿಖಿತ ಪರೀಕ್ಷೆಗೆ ತದನಂತರ ಅರ್ಹತಾನುಸಾರ ಮೌಖಿಕ ಪರೀಕ್ಷೆಗೂ ಸಹ ಅನುವು ಮಾಡಲಾಗಿರುತ್ತದೆ.

ನೀವು ದಿನಾಂಕ: 30.12.2009 ರಂದು ಮೌಖಿಕ ಪರೀಕ್ಷೆಗೆ ಹಾಜರಾಗಿದ್ದು, ಆ ದಿನದಂದು ಉಲ್ಲೇಖಿತ-4 ಮತ್ತು 5 ರ ಜ್ಞಾಪನ ಮತ್ತು ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸಿರುವಿರಾ ಎಂದು ಕೇಳಿದಾಗ ಉಲ್ಲೇಖಿತ-3 ರ ಘೋಷಣೆಯಲ್ಲಿ ಈ ಹಿಂದೆ ಮಾಜಿ ಸೈನಿಕ ಮೀಸಲಾತಿಯನ್ನು ಉಪಯೋಗಿಸಿಕೊಂಡು ಯಾವುದೇ ರಾಜ್ಯ ಸರ್ಕಾರಿ ನೌಕರಿಯನ್ನು ಪಡೆದುಕೊಂಡಿರುವುದಿಲ್ಲವೆಂದು ಮತ್ತು ಮೀಸಲಾತಿಯನ್ನು ಪಡೆದಿರುವುದು ಕಂಡು ಬಂದಲ್ಲಿ ತನ್ನ ಅಭ್ಯರ್ಥಿತನವನ್ನು ರದ್ದುಪಡಿಸುವುದರಲ್ಲಿ ಯಾವುದೇ ಅಭ್ಯಂತರವಿರುವುದಿಲ್ಲವೆಂದು ಘೋಷಿಸಿರುತ್ತೀರಿ.

ನೇಮಕಾತಿ ಸಮಿತಿಯು ಮೌಖಿಕ ಪರೀಕ್ಷೆಯನ್ನು ನಡೆಸಿದ ನಂತರ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 19.01.2010 ರಂದು ಪ್ರಕಟಿಸಿದ್ದು, ತದನಂತರ ಒಬ್ಬ ಮಾಜಿ ಸೈನಿಕ ಅಭ್ಯರ್ಥಿಯು ನಿಮ್ಮ ಆಯ್ಕೆಗೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಪೊಲೀಸ್ ಆಯುಕ್ತರು ಬೆಂಗಳೂರು ನಗರ ರವರಿಗೆ ಕೋರಿದ್ದು, ಉಲ್ಲೇಖಿತ-6 ರ ಪತ್ರದಲ್ಲಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರು ನೀವು ಅಧಿಸೂಚನೆ ಸಂಖ್ಯೆ: 26/ನೇಮಕಾತಿ/2007-08, ದಿನಾಂಕ: 10.07.2007 ರನ್ವಯ ಮಾಜಿ ಸೈನಿಕ ಮೀಸಲಾತಿ

ಅಡಿಯಲ್ಲಿ ಬೆಂಗಳೂರು ನಗರದ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಆಯ್ಕೆಯಾಗಿರುವುದಾಗಿ ತಿಳಿಸಿರುತ್ತಾರೆ. ಅದೇ ರೀತಿ ನೀವು ಕರ್ನಾಟಕ ಲೋಕ ಸೇವಾ ಆಯೋಗದವರು ಆಯ್ಕೆ ಮಾಡಿರುವ ಪ್ರಥಮ ದರ್ಜೆ ಸಹಾಯಕ ಹುದ್ದೆಯನ್ನು ಕೂಡ ಮಾಜಿ ಸೈನಿಕ ಮೀಸಲಾತಿಯಲ್ಲಿ ಪಡೆದಿರುತ್ತೀರಿ ಎಂದು ಪೊಲೀಸ್ ಆಯುಕ್ತರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ.

ನೀವು ಆಯ್ಕೆ ಸಲುವಾಗಿ ಸಲ್ಲಿಸಿರುವ ಅರ್ಜಿಯಲ್ಲಿ ಮತ್ತು ದಿನಾಂಕ: 30.12.2009 ರಂದು ಮೌಖಿಕ ಪರೀಕ್ಷೆಗೆ ಹಾಜರಾದ ದಿನದಂದು ನೀಡಿದ ಘೋಷಣೆಯಲ್ಲಿ ತಪ್ಪು/ ಸುಳ್ಳು ಮಾಹಿತಿಯನ್ನು ನೀಡಿದ್ದರಿಂದ ಮತ್ತು ಉಲ್ಲೇಖಿತ-4 ಮತ್ತು 5 ರ ಜ್ಞಾಪನ ಮತ್ತು ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸದೇ ಇರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.

**ಆದೇಶ ಸಂಖ್ಯೆ: 32/ನೇಮಕಾತಿ/2009-10, ದಿನಾಂಕ: 04.03.2010**

ಶ್ರೀ ರವಿಕುಮಾರ್ ಆದ ನೀವು ಈ ಹಿಂದೆ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಆಯ್ಕೆ ಸಲುವಾಗಿ ಮಾಜಿ ಸೈನಿಕ ಮೀಸಲಾತಿಯನ್ನು ಉಪಯೋಗಿಸಿಕೊಂಡು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಆಯ್ಕೆಯಾಗಿದ್ದು ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದವರು ಮಾಡಿರುವ ಪ್ರಥಮ ದರ್ಜೆ ಸಹಾಯಕ ಆಯ್ಕೆಯಲ್ಲಿಯೂ ಕೂಡ ಮಾಜಿ ಸೈನಿಕ ಮೀಸಲಾತಿ ಪಡೆದಿದ್ದುರಿಂದ ಉಲ್ಲೇಖಿತ-4 ಮತ್ತು 5 ರ ಜ್ಞಾಪನ ಮತ್ತು ಪತ್ರದಲ್ಲಿ ಒಬ್ಬ ಮಾಜಿ ಸೈನಿಕ ಅಭ್ಯರ್ಥಿಯು ಮಾಜಿ ಸೈನಿಕ ಮೀಸಲಾತಿಯನ್ನು ಉಪಯೋಗಿಸಿದಲ್ಲಿ ಅದನ್ನು ಮತ್ತೊಮ್ಮೆ ಆಯ್ಕೆ ಸಲುವಾಗಿ ಉಪಯೋಗಿಸಲು ಬರುವುದಿಲ್ಲವೆಂದು ನಮೂದಿಸಿದ್ದು, ನೀವು ನಿಮ್ಮ ಘೋಷಣೆಯಲ್ಲಿ ಮತ್ತು ಸಲ್ಲಿಸಲಾದ ಅರ್ಜಿಯಲ್ಲಿ ತಪ್ಪು/ ಸುಳ್ಳು ಮಾಹಿತಿಯನ್ನು ನೀಡಿರುವುದಾಗಿ ತಿಳಿದು ಬಂದಿರುವುದರಿಂದ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಗೆ ಮಾಜಿ ಸೈನಿಕ ಮೀಸಲಾತಿಯಡಿಯಲ್ಲಿ ಕ್ರಮ ಸಂಖ್ಯೆ: 319 ರಲ್ಲಿ ನಿಮ್ಮ ಅಭ್ಯರ್ಥಿತನವನ್ನು ಪರಿಗಣಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿರುತ್ತದೆ.

ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
(ನೇಮಕಾತಿ ಮತ್ತು ತರಬೇತಿ) ಹಾಗೂ
ಸದಸ್ಯ ಕಾರ್ಯದರ್ಶಿ, ಪಿಎಸ್ಐ ನೇಮಕಾತಿ ಸಮಿತಿ,
ಕಾರ್ಲ್‌ಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

ಗೆ

ಶ್ರೀ ರವಿಕುಮಾರ್,
ಗೊಲ್ಲಹಳ್ಳಿ ತಾಂಡ,
ಅಂತರಹಳ್ಳಿ ಅಂಚೆ,
ದೊಡ್ಡಬಳ್ಳಾಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ - 561 203.